RNU AIR DHARWAD

# SEPTEMBER 25, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಕರ್ನಾಟಕದಿಂದ ಜಿಐ–ಟ್ಯಾಗ್ ಮಾಡಲಾದ, ಅಸಾಧಾರಣ ರುಚಿಗೆ ಹೆಸರುವಾಸಿಯಾಗಿರುವ, ಕಲಬುರಗಿ ತೊಗರಿ ಬೇಳೆಯನ್ನು, ಮಾಲ್ಡೀವ್ಸ್ ದೇಶಕ್ಕೆ ರಫ್ತು ಮಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆಗಳ ಖಾತೆ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಎಕ್ಸ್ ಖಾತೆ ಮೂಲಕ ಮಾಹಿತಿ ಹಂಚಿಕೊಂಡಿರುವ ಅವರು, ಪ್ರೀಮಿಯಂ ದ್ವಿದಳ ಧಾನ್ಯಗಳ 1 ಮೆಟ್ರಿಕ್ ಟನ್ ಉತ್ಪನ್ನವನ್ನು ಮಾಲ್ಡೀವ್ಸ್‌ಗೆ ರಫ್ತು ಮಾಡಲಾಗಿದೆ. ರೈತರು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ತಮ್ಮ ಉತ್ಪನ್ನಗಳಿಗೆ ಶೇಕಡ 30 ಕ್ಕಿಂತ  ಹೆಚ್ಚಿನ ಬೆಲೆಯನ್ನು ಪಡೆಯುತ್ತಾರೆ ಎಂದು ತಿಳಿಸಿದ್ದಾರೆ.

<><><>

ಪಶ್ಚಿಮಘಟ್ಟಗಳ ಪರಿಸರ ಸೂಕ್ಷ್ಮ ವಲಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಪರಿಸರ ಖಾತೆ ಸಚಿವ, ಭೂಪೇಂದ್ರ ಯಾದವ, ವಾಸ್ತವಾಂಶ ಮತ್ತು ಸಮರ್ಥನೀಯ ಆಧಾರಗಳ ಮೇಲೆ, ಅನುಷ್ಠಾನ ಸಾಧ್ಯತೆ ಪರಿಶೀಲಿಸಲು, ಸಮಿತಿ ರಚಿಸಿದ್ದಾಗಿ, ಸ್ಪಷ್ಟ ಪಡಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ, ಹಳಿಯಾಳ ಕ್ಷೇತ್ರದ ಶಾಸಕ, ಆರ್.ವಿ. ದೇಶಪಾಂಡೆ, ಕೇಂದ್ರ ಪರಿಸರ ಖಾತೆ ಸಚಿವರಿಗೆ ಪತ್ರ ಬರೆದು, ಕೇಂದ್ರದ 7ನೇ ಕರಡು ಅಧಿಸೂಚನೆ ಹಾಗೂ ಡಾಕ್ಟರ್ ಕೆ.ಕಸ್ತೂರಿರಂಗನ್ ವರದಿಯ, ಸಾಧಕ ಬಾಧಕಗಳನ್ನು ಸಮಗ್ರವಾಗಿ ಪರಿಶೀಲಿಸಿ, ನಿರ್ಣಯಿಸುವಂತೆ, ಮನವಿ ಮಾಡಿದ ಹಿನ್ನೆಲೆ, ಸಕಾರಾತ್ಮಕವಾಗಿ ಸ್ಪಂದಿಸಿದ್ದಾಗಿ, ಫೇಸ್‌ಬುಕ್‌ನಲ್ಲಿ ತಿಳಿಸಿದ್ದಾರೆ.

<><><>

ಸೇವಾ ಸಂಕಲ್ಪ ಮಾಸಿಕ ಅಭಿಯಾನ, ದೇಶಾದ್ಯಂತ ಜರುಗುತ್ತಿದೆ. ಕೇಂದ್ರ ಸರ್ಕಾರ, 2021, ಡಿಸೆಂಬರ್ 21 ರಂದು, 'ಸೆಮಿಕಾನ್ ಇಂಡಿಯಾ ಯೋಜನೆ'ಯನ್ನು ಘೋಷಿಸಿತು. ದೇಶದಲ್ಲೇ ಸೆಮಿಕಂಡಕ್ಟರ್ ಉತ್ಪಾದನೆಯ, ಸಮಗ್ರ ಪರಿಸರ ವ್ಯವಸ್ಥೆ ನಿರ್ಮಿಸುವುದು, ಈ ಯೋಜನೆಯ ಉದ್ದೇಶವಾಗಿದೆ.  ಚಿಪ್‌ಗಳ ವಿನ್ಯಾಸ, ತಯಾರಿಕೆ, ಫ್ಯಾಬ್ರಿಕೇಶನ್ ಮತ್ತು ಪ್ಯಾಕೇಜಿಂಗ್ ಸೇರಿದಂತೆ, ಸಂಪೂರ್ಣ ಸೆಮಿಕಂಡಕ್ಟರ್ ಸರಪಳಿಯನ್ನು, ಅಭಿವೃದ್ಧಿಪಡಿಸಲು, ಇಂಡಿಯಾ ಸೆಮಿಕಂಡಕ್ಟರ್ ಮಿ 'ನ್ ಸ್ಥಾಪಿಸಲಾಯಿತು.

<><><>

ವಿಶೇಷಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಅಕ್ಟೋಬರ್ ಒಂದರಂದು, ಹಿರಿಯ ನಾಗರಿಕರ ದಿನಾಚರಣೆ ಹಾಗೂ ಪೂರ್ವಭಾವಿಯಾಗಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಈ ಕುರಿತು, ಮಾಹಿತಿ ನೀಡಿದ್ದಾರೆ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ, ವಿಜಯನಗರ ಜಿಲ್ಲೆ ಅಧಿಕಾರಿ, ಅನುಪಮಾ.

<><><>

ಅನುಪಮಾ ಧ್ವನಿ 33 ಸೆಕೆಂದುಗಳು

<><><>

ಕೊಡಗು ಜಿಲ್ಲೆ, ಪೊನ್ನಂಪೇಟೆ ತಾಲೂಕು, ಕೊಳತೋಡು, ಬೈಗೋಡು ಪ್ರದೇಶಕ್ಕೆ ಭೇಟಿ ನೀಡಿ, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಕುರಿತು, ಜನ ಜಾಗೃತಿ ಜರುಗಿತು.  ತುರ್ತು ಸಹಾಯವಾಣಿ 1–1–2, ಮಕ್ಕಳ ಸಹಾಯವಾಣಿ 1–0–9–8, ಮಹಿಳೆಯರ ಸಹಾಯವಾಣಿ 1–8–1, ಸೈಬರ್ ಸಹಾಯವಾಣಿ 1–9–3–0 ಮೂಲಕ, ಮಾಹಿತಿ ನೀಡುವಂತೆ, ಕಾರ್ಮಿಕ ಅಧಿಕಾರಿ ಯತ್ನಟ್ಟಿ, ಸಾರ್ವಜನಿಕರನ್ನು ಕೋರಿದರು.

<><><>

ಇಂದು, ಏಕಾತ್ಮ ಮಾನವತಾವಾದದ ಪ್ರತಿಪಾದಕ, ರಾಷ್ಟ್ರಚಿಂತಕ ದೀನ ದಯಾಳ ಉಪಾಧ್ಯಾಯ ಅವರ ಜನ್ಮದಿನ. ದೀನ ದಯಾಳ ಉಪಾಧ್ಯಾಯ ಅವರ ರಾಷ್ಟ್ರಪರ ಚಿಂತನೆಗಳನ್ನು ಸ್ಮರಿಸಿರುವ, ಕೇಂದ್ರ ಶಿಕ್ಷಣ ಖಾತೆ ಸಚಿವ ಪ್ರಲ್ಹಾದ್ ಜೋಶಿ, ಗೌರವಪೂರ್ವಕ ನಮನಗಳನ್ನು ಸಲ್ಲಿಸಿದ್ದಾರೆ.

<><><>

ಇಂದು ಸಂಗೀತ ಲೋಕದ ದಿಗ್ಗಜ, ಪದ್ಮವಿಭೂಷಣ ಡಾಕ್ಟರ ಎಸ್.ಪಿ ಬಾಲಸುಬ್ರಹ್ಮಣ್ಯಂ ಅವರ ಪುಣ್ಯ ತಿಥಿ. ಎಸ್.ಪಿ ಬಾಲಸುಬ್ರಹ್ಮಣ್ಯಂ ಅವರ ಸಂಗೀತ ಕ್ಷೇತ್ರದ ಕೊಡುಗೆಗಳನ್ನು ಸ್ಮರಿಸಿರುವ,  ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಗೌರವ ನಮನಗಳನ್ನು ಸಲ್ಲಿಸಿದ್ದಾರೆ.

<><><>

ರಾಯಚೂರು ತಾಲೂಕು, ಮಟಮಾರಿ ಗ್ರಾಮದಲ್ಲಿ, ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಆಯೋಜಿಸಿದ್ದ, ಕಾನೂನು ಜಾಗೃತಿ ಅಭಿಯಾನಕ್ಕೆ, ಜಿಲ್ಲಾ ನ್ಯಾಯಾಧೀಶ, ಸಿದ್ದರಾಮಪ್ಪ ಕಲ್ಯಾಣರಾವ, ಚಾಲನೆ ನೀಡಿದರು. ಆಯುಷ್ಮಾನ್ ಭಾರತ, ವೃದ್ಧಾಪ್ಯ ಹಾಗೂ ವಿಧವಾ ವೇತನ, ಕಾರ್ಮಿಕರ ಕಾರ್ಡ್ ವಿತರಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ, ವಿವಿಧ ಜನಪರ ಯೋಜನೆಗಳ ಕುರಿತು, ಮಾಹಿತಿ ನೀಡಿದರು.

<><><>

ಎಲ್ಲ ಮತದಾರರು, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಖಚಿತಪಡಿಸಿಕೊಳ್ಳುವಂತೆ, ಧಾರವಾಡ ಜಿಲ್ಲೆ ಚುನಾವಣಾಧಿಕಾರಿ, ಆರ್.ಸ್ನೇಹಲ್ ಕೋರಿದ್ದಾರೆ.

<><><>

ಪಶ್ಚಿಮ ಪದವಿಧರ ಮತಕ್ಷೇತ್ರದ, ಚುನಾವಣೆ ಹಿನ್ನೆಲೆ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆ ವ್ಯಾಪ್ತಿಯಲ್ಲಿ. ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಅಕ್ಟೋಬರ್ 6ರ ವರೆಗೆ, ನಾಮಪತ್ರ ಸಲ್ಲಿಸಬಹುದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>